# ಅರ್ಥಶಾಸ್ತ್ರ
# ಅಧ್ಯಾಯ-1
# ಅಭಿವೃದ್ಧಿ

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಆರ್ಥಿಕ ಅಭಿವೃದ್ಧಿಯು ಒಂದು ಪ್ರಕ್ರಿಯೆಯಾಗಿದ್ದು ರಾಷ್ಟ್ರೀಯ ಆದಾಯದಲ್ಲಿನ ನಿರಂತರ ಹೆಚ್ಚಳವನ್ನು ಸೂಚಿಸುತ್ತದೆ
2. ಒಂದು ದೇಶದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಸೇವೆಗಳ ಒಟ್ಟು ಮೌಲ್ಯವನ್ನು **ನೈಜ ರಾಷ್ಟ್ರೀಯ ಆದಾಯ** ಎನ್ನುವರು
3. ಅನಭಿವೃದ್ಧಿ ರಾಷ್ಟ್ರದಲ್ಲಿ **ನೈಜ ತಲಾ ವರಮಾನ** ಕಡಿಮೆ ಇರುವುದು
4. ಮಾನವ ಅಭಿವೃದ್ಧಿಯು **ನಿರೀಕ್ಷಿತ ಜೀವಿತಾವಧಿ, ಶೈಕ್ಷಣಿಕ ಸಾಧನೆ ಮತ್ತು ಜೀವನ ಮಟ್ಟ(ತಲಾದಾಯ) ಈ ಮೂರು ಸಾಮರ್ಥ್ಯಗಳ ಸರಾಸರಿಯನ್ನು** ಸೂಚಿಸುತ್ತದೆ
5. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ **ವಿಶ್ವಬ್ಯಾಂಕು**
6. 2014ರಲ್ಲಿ ಭಾರತವು ಮಾನವ ಅಭಿವೃದ್ಧಿ ಸೂಚಕದಲ್ಲಿ **135** ನೇಯ ಸ್ಥಾನ ಹೊಂದಿತ್ತು
7. 2011ರಲ್ಲಿ ಭಾರತದಲ್ಲಿ ಲಿಂಗಾನುಪಾವು **945** ಇತ್ತು

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ರಾಷ್ಟ್ರೀಯ ಆದಾಯ ಎಂದರೇನು?
   ಒಂದು ದೇಶದಲ್ಲಿ ಒಂದು ವರ್ಷದಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಸೇವೆಗಳ ಒಟ್ಟು ಮಾರುಕಟ್ಟೆ ಮೌಲ್ಯವೇ ರಾಷ್ಟ್ರೀಯ ಆದಾಯ
2. ತಲಾ ವರಮಾನ ಎಂದರೇನು?
   ಒಂದು ದೇಶದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಆದಾಯವೇ ತಲಾ ವರಮಾನ
3. ತಲಾ ವರಮಾನವನ್ನು ಹೇಗೆ ಕಂಡುಹಿಡಿಯಲಾಗುತ್ತದೆ?
   ಒಂದು ದೇಶದ ರಾಷ್ಟ್ರೀಯ ವರಮಾನವನ್ನು ಅಲ್ಲಿನ ಜನಸಂಖ್ಯೆಯಿಂದ ಭಾಗಿಸಿದಾಗ ದೊರೆಯುವ ಭಾಗಲಬ್ದವೇ ತಲಾ ವರಮಾನ.
4. ಮಹಿಳಾ ಸಬಲೀಕರಣ ಎಂದರೇನು?
   ಮಹಿಳೆಯರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದೇ ಮಹಿಳಾ ಸಬಲೀಕರಣ

**III ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ಅಭಿವೃದ್ಧಿಯನ್ನು ವ್ಯಾಖ್ಯಾನಿಸಿ. ಅಭಿವೃದ್ಧಿಯ ಪ್ರಕ್ರಿಯೆಯನ್ನು ವಿವರಿಸಿ
   ಒಂದು ಕ್ಷೇತ್ರದ ಪ್ರಗತಿಯನ್ನು ಸೂಚಿಸುವ ಸೂಚಕವೇ ಅಭಿವೃದ್ಧಿ. ಅಭಿವೃದ್ಧಿ ಪ್ರಕ್ರಿಯೆಯು ಉತ್ಪಾದಾನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಯನ್ನು ಸೂಚಿಸುತ್ತದೆ
2. ಅನಭಿವೃದ್ಧಿ ಎಂದರೇನು? ಅದಕ್ಕೆ ಕಾರಣಗಳೇನು?
   ಅನಭಿವೃದ್ಧಿ ಎಂಬ ಶಬ್ದವು ಹಿಂದುಳಿದ, ಪ್ರಗತಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ
   - ಕಡಿಮೆ ತಲಾದಾಯ
   - ನಿರುದ್ಯೋಗ
   - ಬಡತನ
   - ಜನಸಂಖ್ಯೆಯಲ್ಲಿ ಹೆಚ್ಚಳ

3. ಮಾನವ ಅಭಿವೃದ್ಧಿ ಸೂಚ್ಯಂಕ ಎಂದರೇನು? ಅದನ್ನು ಹೇಗೆ ಲೆಕ್ಕ ಹಾಕುತ್ತೀರಿ?
   ನಿರೀಕ್ಷಿತ ಜೀವಿತಾವಧಿ, ಶೈಕ್ಷಣಿಕ ಸಾಧನೆ, ತಲಾದಾಯಗಳ ಮೂಲಕ ಅಭಿವೃದ್ದಿಯನ್ನು ಮಾಪನ ಮಾಡುವ ಸೂಚ್ಯಂಕವೇ ಮಾನವ ಅಭಿವೃದ್ಧಿ ಸೂಚ್ಯಂಕ
   ಈ ಕೆಳಕಂಡ ಮೂರು ಸೂಚಿಗಳ ಮೂಲಕ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಲೆಕ್ಕ ಹಾಕಬಹುದು
   - ನಿರೀಕ್ಷಿತ ಜೀವಿತಾವಧಿ,
   - ಶೈಕ್ಷಣಿಕ ಸಾಧನೆ,
   - ತಲಾದಾಯ
4. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರವುದಕ್ಕೆ ಕಾರಣ ನೀಡಿರಿ
   - ಕೃಷಿಯಲ್ಲಿ ಹಿಂದುಳಿಕೆ
   - ನಿರುದ್ಯೋಗ
   - ಅನಕ್ಷರತೆ
   - ಜನಸಂಖ್ಯಾ ಸ್ಪೋಟ
5. ಲಿಂಗ ಸಮಾನತೆಯನ್ನು ಹೇಗೆ ಸಾಧಿಸಬಹುದು?
   - ಮಹಿಳಾ ಸಾಕ್ಷರತೆ
   - ಸಮಾನ ವೇತನ ಅವಕಾಶ
   - ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ
   - ಮಹಿಳಾ ಸಬಲೀಕರಣ
6. “ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ” ಸಮರ್ಥಿಸಿ
   - ಮಹಿಳೆಯರು ವ್ಯವಹಾರ ನಿರ್ವಹಿಸುವ ಸಾಮರ್ಥ್ಯ ಗಳಿಸಿರುತ್ತಾರೆ
   - ಮಹಿಳೆಯರು ಆದಾಯ ಗಳಿಸುವ ಸಾಮರ್ಥ್ಯ ಗಳಿಸಿರುತ್ತಾರೆ
   - ಆರ್ಥಿಕ ಚಟುವಟಿಕೆಯಲ್ಲಿ ಮಹಿಳಾ ಭಾಗವಹಿಸುವಿಕೆಯನ್ನು ಪ್ರೇರೇಪಿಸುತ್ತದೆ
   - ಸಹಕಾರ ತತ್ವವನ್ನು ಕಲಿಯಲು ಅವಕಾಶ ನೀಡುತ್ತದೆ
7. ಅಭಿವೃದ್ದಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದದ ರಾಷ್ಟ್ರಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ

| ಅಭಿವೃದ್ದಿ ಹೊಂದಿದ ರಾಷ್ಟ್ರಗಳು | ಅಭಿವೃದ್ದಿ ಹೊಂದದ ರಾಷ್ಟ್ರಗಳ |
|---|---|
| • ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ<br>• ತಲವರಮಾನದಲ್ಲಿ ಹೆಚ್ಚಳ<br>• ಕಡಿಮೆ ನಿರುದ್ಯೋಗ<br>• ವೈದ್ಯಕೀಯ ಸೌಲಭ್ಯಗಳ ಲಭ್ಯತೆ<br>• ಹೆಚ್ಚಿನ ಸಾಕ್ಷರತೆ<br>• ಆಹಾರ, ವಸತಿ, ಬಟ್ಟೆಯ ಲಭ್ಯತೆ | • ಕಡಿಮೆ ರಾಷ್ಟ್ರೀಯ ಆದಾಯ<br>• ಕಡಿಮೆ ತಲವರಮಾನ<br>• ನಿರುದ್ಯೋಗ ಮಟ್ಟದಲ್ಲಿ ಹೆಚ್ಚಳ<br>• ವೈದ್ಯಕೀಯ ಸೌಲಭ್ಯಗಳ ಕೊರತೆ<br>• ಕಡಿಮೆ ಸಾಕ್ಷರತೆ<br>• ಆಹಾರ, ವಸತಿ, ಬಟ್ಟೆಯ ಕೊರತೆ |

# ಅಧ್ಯಾಯ–2
# ಗ್ರಾಮೀಣಾಭಿವೃದ್ಧಿ

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. "ಭಾರತದ ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವೃದ್ಧಿ"ಎಂದು ಹೇಳಿದವರು **ಮಹಾತ್ಮ ಗಾಂಧೀಜಿ**
2. ಸಂವಿಧಾನದ 73ನೇ ತಿದ್ದುಪಡಿಯ ಪ್ರಕಾರ ಭಾರತದಲ್ಲಿ **ಮೂರು** ಹಂತದ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ
3. ಪಂಚಾಯತ್ ಸಂಸ್ಥೆಗಳು **ಪ್ರಜಾಪ್ರಭುತ್ವ** ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ
4. ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು **ಮಹಿಳಾ ಸ್ವಸಹಾಯ ಸಂಘ** ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ
   ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಗ್ರಾಮೀಣ ಜನರ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವುದನ್ನು ಗ್ರಾಮೀಣಾಭಿವೃದ್ಧಿ ಎನ್ನಲಾಗಿದೆ
2. ಅಧಿಕಾರ ವಿಕೇಂದ್ರೀಕರಣ ಎಂದರೇನು?
   ಪ್ರತಿಯೊಂದು ಹಳ್ಳಿಯ ಆಡಳಿತ ಹಾಗೂ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮೀಣ ಜನರಿಗೆ ವಹಿಸುವುದನ್ನೇ ಅಧಿಕಾರ ವಿಕೇಂದ್ರೀಕರಣ ಎನ್ನುವರು
3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ
   - ಗ್ರಾಮ ಪಂಚಾಯಿತಿ
   - ತಾಲ್ಲೂಕು ಪಂಚಾಯಿತಿ
   - ಜಿಲ್ಲಾ ಪಂಚಾಯಿತಿ
4. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ
   ಇಂದಿರಾ ಆವಾಸ್ ಯೋಜನೆ, ಆಶ್ರಯ ಯೋಜನೆ

**III ಈ ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ ?
   ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಈ ಕೇಳಗಿನ ರೀತಿಯಲ್ಲಿ ಇದೆ
   - ಬಹುತೇಕ ಜನರು ಕೃಷಿಯನ್ನೇ ಅವಲಂಬಿಸಿದ್ಧಾರೆ
   - ಬಡತನ ಹೆಚ್ಚಾಗಿದೆ
   - ಮೂರನೇ ಒಂದು ಭಾಗದ ಜನರು ಕಡುಬಡತನದಲ್ಲಿದ್ದಾರೆ
   - ಗ್ರಾಮೀಣ ಗುಡಿ ಕೈಗಾರಿಕೆಗಳು ನಶಿಸಿ ಹೋಗಿವೆ
   - ಶೇಖಡಾ 60 ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದಾರೆ
   - ರಾಷ್ಟ್ರೀಯ ಆದಾಯಕ್ಕೆ ಪ್ರಾಥಮಿಕ ವಲಯದ ಪಾಲು ನಿರಂತರವಾಗಿ ಕಡಿಮೆಯಾಗುತ್ತಿದೆ
   - ನಗರ ಮತ್ತು ಹಳ್ಳಿಗಳ ನಡುವಿನ ಅಂತರ ದಿನೇ ದೀನೇ ಹೆಚ್ಚಾಗುತ್ತಿದೆ
2. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ತಿಳಿಸಿ
   - ಗ್ರಾಮೀಣ ಪ್ರದೇಶದ ಬಡತನ, ನಿರುದ್ಯೋಗ, ಅನಕ್ಷರತೆಯ ನಿರ್ಮೂಲನೆ ಮಾಡಲು
   - ಇಲ್ಲಿನ ಜನರ ಜ್ಞಾನ, ಕೌಶಲ, ದುಡಿಯುವ ಸಾಮರ್ಥ್ಯ ಹೆಚ್ಚಿಸುವುದು
   - ಗ್ರಾಮಗಳಿಗೆ ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ ಒದಗಿಸುವುದು
   - ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳ ಅಭಿವೃದ್ಧಿ

- ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ
- ಗ್ರಾಮದಲ್ಲಿನ ಹಿಂದುಳಿದ, ಪ,ಜಾತಿ/ಪ,ಪಂಗಡದ, ಕೃಷಿ ಕಾರ್ಮಿಕರ, ಬಡವರ ಉದ್ಧಾರ

3. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರಿಕರಣದ ಹಿನ್ನಲೆಯಲ್ಲಿ ತಿಳಿಸಿ
   - ಹಳ್ಳಿಯ ಆಡಳಿತಾಧಿಕಾರವನ್ನು ಗ್ರಾಮಸ್ಥರಿಗೆ ನೀಡುವುದು
   - ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸುವುದು
   - ವಿಕೇಂದ್ರೀಕರಣದಿಂದ ಗ್ರಾಮಗಳು ಸ್ವಾವಲಂಬಿ, ಸ್ವಯಂಪೂರ್ಣ, ಸಮೃದ್ದಗೊಳ್ಳುವುವು
   - ಗ್ರಾಮಗಳು ಸ್ವಾವಲಂಬಿ, ಸ್ವಯಂಪೂರ್ಣ, ಸಮೃದ್ದಗೊಳ್ಳುವುದನ್ನೇ "ಗ್ರಾಮ ಸ್ವರಾಜ್ಯ" ಎಂದು ಕರೆಯಲಾಗುತ್ತದೆ
   - ವಿಕೇಂದ್ರೀಕರಣದಿಂದ ಎಲ್ಲಾ ರೀತೀಯ ಶೋಷಣೆ ತಡೆಯಬಹುದು
   - ಮಾನವನ ಸ್ವಾತಂತ್ರ ಮತ್ತು ಘನತೆಯನ್ನು ವಿಕೇಂದ್ರೀಕರಣವು ಸಂರಕ್ಷಿಸುತ್ತದೆ
   - ಸಹಾನೂಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳನ್ನು ವೃದ್ದಿಸುತ್ತದೆ
4. ಗ್ರಾಮೀಣಾಭಿವೃದ್ದಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ
   - ಗ್ರಾಮಗಳಿಗೆ ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ ಒದಗಿಸುವುದು
   - ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿತೆಗಳ ಅಭಿವೃದ್ದಿ
   - ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ದಿ
   - ಗ್ರಾಮದಲ್ಲಿನ ಹಿಂದುಳಿದ, ಪ,ಜಾತಿ/ಪ,ಪಂಗಡದ, ಕೃಷಿ ಕಾರ್ಮಿಕರ, ಬಡವರ ಉದ್ಧಾರ
   - ಉದ್ಯೋಗ ಖಾತರಿ ಮತ್ತು ವಸತಿ ಯೋಜನೆಗಳ ಅನುಷ್ಠಾನ
   - ಗ್ರಾಮೀಣ ವೃದ್ಧರು, ಅಂಗವಿಕಲರು, ವಿಧವೆಯರನ್ನು ಗುರುತಿಸಿ ಸರ್ಕಾರದ ಸೌಲಭ್ಯಗಳನ್ನು ಒದಗಿಸುವುದು
   - **ಸುವರ್ಣ ಗ್ರಾಮೋದಯ ಯೋಜನೆ**ಯ ಅನುಷ್ಠಾನ

## ಅಧ್ಯಾಯ–3
## ಹಣ ಮತ್ತು ಸಾಲ

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಸಾಟಿ ವಿನಿಮಯ ಪದ್ದತಿಯಲ್ಲಿ ವಸ್ತುಗಳ ಬದಲಿಗೆ **ವಸ್ತು** ವಿನಿಮಯ ಮಾಡಲಾಗುತಿತ್ತು
2. ಚೆಕ್‌ಗಳು **ಬ್ಯಾಂಕ್ ಹಣದ** ಸಾಧನಗಳಾಗಿವೆ
3. ಭಾರತೀಯ ರಿಸರ್ವ್ ಬ್ಯಾಂಕು ಸ್ಥಾಪನೆಯಾದ ವರ್ಷ **1935**
4. ಆಪಾನ್ ದೇಶದ ಹಣವನ್ನು **ಯೆನ್** ಎಂದು ಕರೆಯುತ್ತಾರೆ
5. ಭಾರತ ಸರ್ಕಾರ 14 ವಾಣಿಜ್ಯ ಬ್ಯಾಂಕುಗಳನ್ನು **1969** ರಲ್ಲಿ ರಾಷ್ಟ್ರೀಕರಣಗೊಳಿಸಿತು
6. ಕಿರಿದಾದ ಹಣದ ಪೂರೈಕೆಯನ್ನು **M1** ಮತ್ತು **M2** ಮೂಲಕ ಅಳೆಯುತ್ತೇವೆ
7. ಹಣದುಬ್ಬರವು ಹಣದ ಪೂರೈಕೆಯು ಸರಕು–ಸೇವೆಘಳ ಪೂರೈಕೆಗಿಂತ **ಹೆಚ್ಚಾಗಿದ್ದಾಗ** ಸಂಭವಿಸುತ್ತದೆ

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ಸಾಟಿ ವಿನಿಮಯ ಪದ್ಧತಿ ಎಂದರೇನು?
   ವ್ಯಾಪಾರದಲ್ಲಿ ವಸ್ತುಗಳಿಗೆ ಬದಲಾಗಿ ವಸ್ತುಗಳನ್ನು ವಿನಿಮಯ ಮಾಡುವ ಪದ್ದತಿಯೇ ಸಾಟಿ ವಿನಿಮಯ ಪದ್ಧತಿ
2. ಹಣದ ಅರ್ಥ ಮತ್ತು ಕಾರ್ಯಗಳನ್ನು ವಿವರಿಸಿ

ಪಾವತಿಯ ಮಾದ್ಯಮವಾಗಿ, ಮೌಲ್ಯದ ಸಂಗ್ರಹ ಮತ್ತು ಮಾಪನದ ಮಾದ್ಯಮವಾಗಿ ಬಳಸಲ್ಪಡುವ ವಸ್ತುವೇ ಹಣ. ಹಣದ ಕಾರ್ಯಗಳೆಂದರೆ

**ಪ್ರಾಥಮಿಕ ಕಾರ್ಯಗಳು**

- ವಿನಿಮಯದ ಹಾಗೂ ಪಾವತಿಯ ಮಾದ್ಯಮ
- ಮೌಲ್ಯದ ಮಾಪನ

**ಪೂರಕ ಕಾರ್ಯಗಳು**

- ವಿಳಂಬಿತ ಸಂದಾಯದ ಕಾರ್ಯ
- ಮೌಲ್ಯದ ಸಂಗ್ರಾಹಕ
- ಮೌಲ್ಯದ ವರ್ಗಾವಣೆ

3. ಆರ್‌ಬಿಐನ ಕಾರ್ಯಗಳನ್ನು ವಿವರಿಸಿ
    - ನೋಟು ಚಲಾವಣೆಯ ಏಕಸ್ವಾಮ್ಯ
    - ಸರ್ಕಾರದ ಬ್ಯಾಂಕು
    - ಬ್ಯಾಂಕುಗಳ ಬ್ಯಾಂಕು
    - ರಾಷ್ಟ್ರೀಯ ಸಂದಾಯ ಕೇಂದ್ರದ ಸೇವೆ
    - ವಿದೇಶಿ ವಿನಿಮಯ ಮೀಸಲಿನ ನಿಯಂತ್ರಕ
    - ಸಾಲದ ನಿಯಂತ್ರಕ
    - ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ
4. ಭಾರತದಲ್ಲಿ ಬಳಸಲಾಗುತ್ತಿರುವ ಹಣದ ಪೂರೈಕೆಯ ವಿವಿಧ ಪರಿಕಲ್ಪನೆಗಳನ್ನು ವಿವರಿಸಿ
    - M1=ಕರೆನ್ಸಿ ನೋಟುಗಳು, ನಾಣ್ಯಗಳು+ವಾಣಿಜ್ಯ ಬ್ಯಾಂಕುಗಳಲ್ಲಿನ ಬೇಡಿಕೆ ಠೇವಣಿಗಳು
    - M2= M1+ ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು
    - M3= M1+ ವಾಣಿಜ್ಯ ಬ್ಯಾಂಕುಗಳಲ್ಲಿನ ಮುದ್ದತಿ ಠೇವಣಿಗಳು
    - M4= M3+ ಅಂಚೆ ಕಛೇರಿಗಳಲ್ಲಿನ ಒಟ್ಟು ಠೇವಣಿಗಳು
5. ಆರ್‌ಬಿಐ ಬಳಸುವ ಸಾಲ ನಿಯಂತ್ರಣ ಕ್ರಮಗಳನ್ನು ವಿವರಿಸಿ

**ಪರಿಮಾಣಾತ್ಮಕ ಸಾಲ ನಿಯಂತ್ರಣ ಕ್ರಮಗಳು :**

- ಬ್ಯಾಂಕುದರ : ರೆಪೊ ದರ ಮತ್ತು ರಿವರ್ಸ್ ರೆಪೊ ದರ
- ಮುಕ್ತ ಮಾರುಕಟ್ಟೆ ಕಾರ್ಯಚರಣೆ
- ಮೀಸಲು ಅನುಪಾತವನ್ನು ಏರಿಳಿತಗೊಳಿಸುವುದು

**ಗುಣಾತ್ಮಕ ಸಾಲ ನಿಯಂತ್ರಣ ಕ್ರಮಗಳು :**

- ಮಾರ್ಜಿನ್ ಪ್ರಮಾಣದ ಬದಲಾವಣೆ
- ಸಾಲದ ಪಡಿತರ / ಸಾಲದ ಗರಿಷ್ಟ ಮಿತಿ ನಿಗಧಿ
- ನೈತಿಕ ಒತ್ತಡ
- ನೇರ ಕ್ರಮ

# ಅಧ್ಯಾಯ – 4,
# ಸಾರ್ವಜನಿಕ ಹಣಕಾಸು ಮತ್ತು ಆಯವ್ಯಯ

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಸರ್ಕಾರವು ಸಾರ್ವಜನಿಕ ಹಣಕಾಸನ್ನು **ಕೋಶಿಯ ನೀತಿ** ಮೂಲಕ ನಿರ್ವಹಿಸುತ್ತದೆ
2. ಆಯ-ವ್ಯಯದಲ್ಲಿ ಸರ್ಕಾರದ ಆದಾಯವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು **ಉಳಿತಾಯ ಆಯ-ವ್ಯಯ** ಎಂದು ಕರೆಯುತ್ತಾರೆ
3. ಕೇಂದ್ರ ಸರ್ಕಾರದ ಆಯ-ವ್ಯಯವನ್ನು ಲೋಕಸಭೆಯಲ್ಲಿ **ಕೇಂದ್ರ ಹಣಕಾಸು ಮಂತ್ರಿ** ಮಂಡಿಸುತ್ತಾರೆ
4. ಜಿ.ಎಸ್.ಟಿ ಯು ಜಾರಿಗೆ ಬಂದ ದಿನಾಂಕ **01ನೇ ಜುಲೈ 2017**

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ
   ಸರ್ಕಾರದ ಆದಾಯ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವ ವಿಭಾಗವೇ ಸಾರ್ವಜನಿಕ ಹಣಕಾಸು
2. ಆಯ-ವ್ಯಯ ಎಂದರೇನು?
   ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯೇ ಆಯ-ವ್ಯಯ
3. ಕೊರತೆ ಆಯ-ವ್ಯಯದ ಅರ್ಥ ಬರೆಯಿರಿ
   ಮುಂಗಡ ಪತ್ರದಲ್ಲಿ ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಕೊರತೆ ಆಯ-ವ್ಯಯ ಎನ್ನುವರು
4. ಪ್ರತ್ಯಕ್ಷ ತೆರಿಗೆ ಎಂದರೇನು?
   ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿದ್ಧರೆ, ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುವರು
5. ವಿತ್ತೀಯ ಕೊರತೆಯ ಸೂತ್ರ ಬರೆಯಿರಿ
   ವಿತ್ತೀಯ ಕೊರತೆ=(ಕಂದಾಯ ಆದಾಯ+ಸಾಲೇತರ ಬಂಡವಾಳ ಆದಾಯ)-ಒಟ್ಟು ವೆಚ್ಚ

**III** ಮೂರು ಅಂಕದ ಪ್ರಶ್ನೋತ್ತರಗಳು

1. ಸಾರ್ವಜನಿಕ ವೆಚ್ಚದ ಏರಿಕೆಗೆ ಕಾರಣಗಳನ್ನು ತಿಳಿಸಿ
   - ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುತ್ತಿರುವುದು
   - ಉದ್ಯಮ, ವ್ಯವಹಾರ ಮತ್ತು ವಾಣಿಜ್ಯಕ್ಕೆ ಪ್ರೋತ್ಸಾಹ ನೀಡುತ್ತಿರುವುದು
   - ಕೃಷಿ-ಗ್ರಾಮೀಣಾಭಿವೃದ್ದಿಗೆ ಪ್ರೋತ್ಸಾಹ ನೀಡುತ್ತಿರುವುದು
   - ಸಮತೋಲನಕರ ಪ್ರಾದೇಶಿಕ ಬೆಳವಣಿಗೆಗೆ ಪ್ರೋತ್ಸಾಹ
   - ಸಂಪೂರ್ಣ ಉದ್ಯೋಗದ ಸಾಧನೆಗಾಗಿ
   - ಸಾಮಾಜಿಕ ಕಲ್ಯಾಣದ ಸಾಧಿಸುವುದು
2. ಸರ್ಕಾರವು ಯಾವ ವಿಧದ ತೆರಿಗೆಗಳನ್ನು ವಿಧಿಸುತ್ತದೆ
   - ಪ್ರತ್ಯಕ್ಷ ತೆರಿಗೆಗಳು
   - ಪರೋಕ್ಷ ತೆರಿಗೆಗಳು
3. 2017-18ರ ಕೇಂದ್ರ ಸರ್ಕಾರದ ಆಯ-ವ್ಯಯದಲ್ಲಿ ಬಡ್ಡಿ ಪಾವತಿಯ ಪ್ರತಿಶತ ಪ್ರಮಾಣ ಎಷ್ಟು?
   5,23,078 ಕೋಟಿ ರೂಪಯಿಗಳು
4. ಕೇಂದ್ರ ಸರ್ಕಾರದ ತೆರಿಗೆಯೇತರ ವರಮಾನದ ಮೂಲಗಳನ್ನು ತಿಳಿಸಿ
   - ಭಾರತೀಯ ರಿಸರ್ವ ಬ್ಯಾಂಕಿನ ನಿವ್ವಳ ಆದಾಯ

- ಭಾರತೀಯ ರೈಲ್ವೆಗಳಿಸುವ ನಿವ್ವಳ ಲಾಭ
- ಅಂಚೆ ಮತ್ತು  ದೂರವಾಣಿ ಸೇವೆಗಳಿಂದ ಬರುವ ಆದಾಯ
- ಸಾರ್ವಜನಿಕ ಉದ್ಯಮಗಳು ಗಳಿಸುವ ಲಾಭ
- ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ
- ವಿವಿಧ ರೀತಿಯ ಶುಲ್ಕಗಳು ಮತ್ತು ದಂಡಗಳು

5. ಕೊರತೆ ಹಣಕಾಸು ಎಂದರೇನು? ಅದರ ನಾಲ್ಕು ವಿಧಗಳನ್ನು ಹೆಸರಿಸಿ
   ಸರ್ಕಾರದ ಆಯ–ವ್ಯಯ ಪತ್ರದ ಕಾರ್ಯಾಚರಣೆಯ ಮೂಲಕ ಅರ್ಥವ್ಯವಸ್ಥೆಯ ನಿವ್ವಳ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕ್ರಮವೇ ಕೊರತೆ ಹಣಕಾಸು
   ಕೊರತೆ ಹಣಕಾಸಿನ ನಾಲ್ಕು ವಿಧಗಳೆಂದರೆ
   - ವಿತ್ತೀಯ ಕೊರತೆ
   - ಆಯ–ವ್ಯಯ ಕೊರತೆ
   - ಕಂದಾಯ ಕೊರತೆ
   - ಪ್ರಾಥಮಿಕ ಕೊರತೆ
6. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ತಿಳಿಸಿ
   - ಸರ್ಕಾರವು ತನ್ನ ಕೋಶಿಯ ನೀತಿ ರಚಿಸಲು ಸಹಕಾರಿ
   - ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲದ ಸದ್ಬಳಕೆ
   - ಆದಾಯದ ಅಸಮಾನ ಹಂಚಿಕೆಯ ನಿವಾರಣೆ
   - ಬಡತನ ನಿರುದ್ಯೋಗ ನಿರ್ಮೂಲನೆ
   - ಬೆಲೆಗಳಲ್ಲಿನ ಸ್ಥಿರತೆ
   - ಆರ್ಥಿಕ ಸ್ಥಿರತೆಗೆ ಸಹಕಾರಿ